| | | | |
|---|---|---|---|
| 20 | ಲಿಂಗದಹಳ್ಳಿ ಇಂಗುಕೆರೆ | 16 | 2.22 |
| 21 | ನಿಂಬಾಳ ಇಂಗು ಕರೆ | 41 | 1.73 |
| 22 | ಕಡಗಂಚಿ ಇಂಗುಕೆರೆ | 57 | 8.07 |
| 23 | ಝಳಕಿ ಪಿ.ಟಿ. | 46 | 5.25 |
| 24 | ಮಾಡ್ಯಾಳ ಪಿ.ಟಿ. | 48 | 7.26 |
| 25 | ಹಡಲಗಿ ಸ.ನೀ.ಕೆರೆ | 77 | 18.96 |
| 26 | ಯಲಲಿನಾವದಗಿ ಪಿ.ಟಿ | 28 | 5.07 |

**ಖಾತಾ ಬದಲಾವಣೆ**

**87 (127) ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ) :** ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಾರಸುದಾರರ ನೆಲೆಯಲ್ಲಿ ಖಾತಾ ಬದಲಾವಣೆಗೆ ಅರ್ಜಿ ಸಲ್ಲಿಸುವವರಿಂದ ಜಾಗದ ನಕ್ಷೆಯನ್ನು ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಇಂತಹ ಪ್ರಕರಣಗಳಲ್ಲಿ ಖಾತಾದಾರರ ಹೆಸರು ಮಾತ್ರ ಬದಲಾವಣೆಯಾಗುವುದರಿಂದ ನಕ್ಷೆಯನ್ನು ಅರ್ಜಿಯೊಂದಿಗೆ ಸಲ್ಲಿಸುವುದು ಅಗತ್ಯವಿಲ್ಲವೆಂಬ ಆದೇಶ ಹೊರಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

**ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :**

ಅ) ಹೌದು.

ಆ) ಪೂರ್ಣ ಸರ್ವೆ ನಂಬರಿನ ವಿಸ್ತೀರ್ಣ / ಹಿಸ್ಸಾ ನಂಬರಿನ ಪೂರ್ಣ ವಿಸ್ತೀರ್ಣ ಒಬ್ಬ ಮಾಲೀಕರಿಂದ ಇನ್ನೊಬ್ಬರಿಗೆ ವರ್ಗಾಯಿಸಲ್ಪಡುತ್ತಿದ್ದಲ್ಲಿ/ ವಾರಸುದಾರಿಕೆಯಲ್ಲಿ ಇಂತಹ ಪೂರ್ಣ ಸರ್ವೆ ನಂಬರು ಅಥವಾ ಹಿಸ್ಸಾ ನಂಬರು ವಾರಸುದಾರರಿಗೆ ವರ್ಗಾಯಿಸುವ ಸಂದರ್ಭದಲ್ಲಿ ಮ್ಯುಟೇಷನ್ ಪೂರ್ವ ನಕ್ಷೆ ಅವಶ್ಯಕತೆ ಇರುವುದಿಲ್ಲ. ಈಗಾಗಲೇ ಈ ಬಗ್ಗೆ ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 224 ಮುನೋಮು 2008, ದಿನಾಂಕ: 21.7.2008 ರಂತೆ ನಿರ್ದೇಶನ ನೀಡಿರುತ್ತದೆ.